8. ಗಮನ ಸೆಳೆಯುವ ಸೂಚನೆ

(ಅ) ವಿಷಯ :- ಸದಲಗಾ ಪಟ್ಟಣ ಪಂಚಾಯಿತಿಯ ಕಾರ್ಯದರ್ಶಿಗಳು, ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದ ಮೇಲೆ ಸರ್ಕಾರದ ಆಡಳಿತದ ಅವಧಿಯಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿದ್ದು ಕಾರ್ಯದರ್ಶಿಗಳ ಮೇಲೆ ಯಾವುದೇ ರೀತಿಯ ಕಾನೂನು ಕ್ರಮ ಕೈಗೊಳ್ಳದಿರುವ ಕುರಿತು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ-ಸದಲಗ) :- ಮಾನ್ಯ ಅಧ್ಯಕ್ಷರೆ, ಸದಲಗಾ ಪಟ್ಟಣ ಪಂಚಾಯಿತಿಯ ಕಾರ್ಯದರ್ಶಿಗಳು, ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದ ಮೇಲೆ ಸರ್ಕಾರದ ಆಡಳಿತದ ಅವಧಿಯಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿದ್ದು ಕಾರ್ಯದರ್ಶಿಗಳ ಮೇಲೆ ಯಾವುದೇ ರೀತಿಯ ಕಾನೂನು ಕ್ರಮ ಕೈಗೊಳ್ಳದಿರುವ ಕುರಿತು ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ(ಪೌರಾಡಳಿತ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು):- ಮಾನ್ಯ ಅಧ್ಯಕ್ಷರೆ,

ಸದಲಗಾ ಪಟ್ಟಣ ಪಂಚಾಯಿತಿಯಲ್ಲಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದ ಮೇಲೆ, ಸಾಕಷ್ಟು ಅವ್ಯವಹಾರಗಳು ನಡೆದಿರುವ ಬಗ್ಗೆ ದೂರು ಬಂದಿರುತ್ತವೆ. ಈ ಅವ್ಯವಹಾರಗಳ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಬೆಳಗಾವಿ ಅವರಿಗೆ ಸೂಚಿಸಲಾಗಿದೆ ಹಾಗೂ ಈ ಅವ್ಯವಹಾರಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ವರದಿ ಸಲ್ಲಿಸಲು ಪೌರಾಡಳಿತ ನಿರ್ದೇಶನಾಲಯದ ಸಹಾಯಕ ನಿರ್ದೇಶಕರು (ಆಡಳಿತ), ಸಹಾಯಕ ಕಾರ್ಯಪಾಲಕ ಅಭಿಯಂತರು ಮತ್ತು ಲೆಕ್ಕ ಪರಿಶೋಧನಾಧಿಕಾರಿಗಳನ್ನು ಒಳಗೊಂಡ ತನಿಖಾ ತಂಡವನ್ನು ರಚಿಸಲಾಗಿದೆ. ಈ ತಂಡವು ಅತೀ ಶೀಘ್ರವಾಗಿ ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಲು ಸೂಚಿಸಲಾಗಿದೆ. ವರದಿ ಬಂದ ನಂತರ ಪರಿಶೀಲಿಸಿ, ಅವ್ಯವಹಾರವಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನು ರೀತ್ಯ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಈಗಾಗಲೇ ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದ ಮೇಲೆ ಕಳೆದ ಎರಡು ವರ್ಷಗಳಲ್ಲಿ ಸಾಕಷ್ಟು ಅವ್ಯವಹಾರಗಳನ್ನು ಮಾಡಿದ್ದಾರೆ. ಆ ಎಲ್ಲಾ ಅವ್ಯವಹಾರಗಳನ್ನೂ ತಮ್ಮ ಗಮನಕ್ಕೆ ತಂದಾಗ ದಿ: 14-07-2008ರಂದು

ಅವನನ್ನು ಸದಲಗಾ ಪಟ್ಟಣ ಪಂಚಾಯಿತಿಯಿಂದ ಮುಧೋಳ ಪಟ್ಟಣ ಪಂಚಾಯಿತಿಗೆ ವರ್ಗ ಮಾಡಲಾಗಿತ್ತು. ವರ್ಗವಾದ ಮೇಲೆ ಅವನು ಕೋರ್ಟ್‌ಗೆ ಹೋಗೆ ಸ್ಟೇ ತೆಗೆದುಕೊಂಡು ಬಂದ. ಸ್ಟೇ ವೆಕೇಟ್ ಆಯಿತು. ಮತ್ತೆ, ಬೇರೊಬ್ಬ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ತರಹ ಒಬ್ಬರು ಹೋಗುವುದು, ಒಬ್ಬರು ಬರುವುದು ಆಯಿತು. ತನ್ನ ಅವಧಿಯಲ್ಲಿ ಚಿಕೂನ್‌ಗುನ್ಯ ರೋಗ ಆ ಊರಿನಲ್ಲಿ ಹರಡಿದೆ ಎಂದು ಎರಡು ಲಕ್ಷ ರೂಪಾಯಿಗಳ ಖರ್ಚು ಹಾಕಿದ್ದು ಅದಕ್ಕೆ ಯಾವುದೇ receipt ಗಳಿಲ್ಲ. ನಾವು ವೈದ್ಯಾಧಿಕಾರಿಗಳನ್ನು ಸಂಪರ್ಕಿಸಿದಾಗ ವೈದ್ಯಾಧಿಕಾರಿಗಳು ಒಂದು certificate ಕೊಟ್ಟಿದ್ದಾರೆ. ಅದೇನೆಂದರೆ, 2007-2008ನೇ ಸಾಲಿನಲ್ಲಿ ಸಲದಗಾ ಪಟ್ಟಣ ಪಂಚಾಯಿತಿಯಲ್ಲಿ ಯಾವುದೇ ಚಿಕೂನ್‌ಗುನ್ಯ ರೋಗ ಬಂದಿರುವುದಿಲ್ಲ ಮತ್ತು ಇಲ್ಲಿ ಯಾವುದೇ ತರಹದ patient ಗಳು ನಮ್ಮ hospital ಗೆ admit ಆಗಿಲ್ಲವೆಂದು certificate ಕೊಟ್ಟಿದ್ದಾರೆ. ಅದಲ್ಲದೆ, ಅವನು ತನ್ನ 2 ವರ್ಷಗಳ ಅವಧಿಯಲ್ಲಿ ಸುಮಾರು 12 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಸಲುವಾಗಿ ಅಲ್ಲಿ ಆ ವಾರ್ಡ್‌ನಲ್ಲಿ, ಈ ವಾರ್ಡ್‌ನಲ್ಲಿ ನೀರು leakage ಆಗಿದೆ ಎಂದು 12 ಲಕ್ಷ ರೂಪಾಯಿಗಳನ್ನು ಖರ್ಚು ಹಾಕಿದ್ದಾನೆ. ಅದಕ್ಕೆ ಯಾವುದೇ ರಸೀತಿಗಳಿಲ್ಲ. ಆಮೇಲೆ, 2006ರಲ್ಲಿ ಅಲ್ಲಿಯ ಪಟ್ಟಣ ಪಂಚಾಯಿತಿಯ ಯಾವುದೇ ಜಾಗವನ್ನು ಲಿಲಾವು ಮಾಡಬಾರದೆಂದು ಠರಾವು ತೆಗೆದುಕೊಂಡಿದ್ದಾರೆ. ಅದಾದಮೇಲೆ, ಅದರಲ್ಲಿಯೇ ಸಂಬಳಗಿ ಎನ್ನುವವರು ಚಾರ್ಜ್ ತೆಗೆದುಕೊಂಡ ಮೇಲೆ ಆ 2006ನೇ ಇಸವಿಯಲ್ಲಿ ಅದಕ್ಕೆ ಮತ್ತೊಂದು ಪ್ಲಾನ್ ಸೇರಿಸಿ 4 ಜನರಿಗೆ ಲಿಲಾವು ಮೂಲಕ 4 flat ಗಳನ್ನು ಹಂಚಿದ್ದಾನೆ.

ಇಂಥ ಸಾಕಷ್ಟು ಅವ್ಯವಹಾರಗಳನ್ನು ಮಾಡಿರುವುದರ ಬಗ್ಗೆ ಅಲ್ಲಿಯ ಪುರಸಭಾ ಸದಸ್ಯರು ಬೆಂಗಳೂರಿಗೆ ಹೋಗಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಿವೇದನೆ ಮಾಡಿದ್ದಾರೆ. ಅದಾದಮೇಲೆ, HUD Secretary ಯವರಿಗೆ ಅರ್ಜಿ ಕೊಟ್ಟಿದ್ದಾರೆ. ಕಳೆದ ವರ್ಷ ಜಿಲ್ಲಾಧಿಕಾರಿಯವರಿಗೂ ಅರ್ಜಿ ಕೊಟ್ಟಿದ್ದು ಇದುವರೆಗೂ ಅದರ ಬಗ್ಗೆ ತನಿಖೆಯಾಗಿಲ್ಲ. ನನ್ನನ್ನು ಇಲ್ಲಿಂದ ಹೊರಗೆ ಹಾಕಿಬಿಟ್ಟರೆ ನಾನೇನು ಕಳ್ಳತನ ಮಾಡಿದ್ದೇನೆ ಅದೆಲ್ಲಾ ಹೊರಗೆ ಬರುತ್ತದೆಂದು ಅವನು ಈ ಜಾಗ ಬಿಡುವುದಕ್ಕೆ ತಯಾರಾಗಿಲ್ಲ. ಅದಕ್ಕೆ ಸರ್ಕಾರ ಸಹಕರಿಸುತ್ತಿದೆ. ಭ್ರಷ್ಟ ಅಧಿಕಾರಿಗಳನ್ನು ಮನೆಗೆ ಕಳುಹಿಸುತ್ತೇವೆಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆ. ನೀವು ಭ್ರಷ್ಟ ಅಧಿಕಾರಿಗಳನ್ನು ತಂದು ನನ್ನ ಕ್ಷೇತ್ರಕ್ಕೆ ಹಾಕುವ ಕೆಲಸ ಮಾಡುತ್ತಿದ್ದೀರಿ. ಅದು

ಬಿಟ್ಟು ಬೇರೆ ಏನೂ ಮಾಡಿಲ್ಲ. ನಾವು ಒಂದು ವರ್ಷದಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಕಾಗದ ಪತ್ರಗಳನ್ನು ನಾನು ನಿಮಗೆ ತೋರಿಸುತ್ತೇನೆ. ತಪ್ಪಾಗಿರುವುದನ್ನು ತೋರಿಸುತ್ತೇನೆ. ಆ ಭ್ರಷ್ಟ ಅಧಿಕಾರಿ ಏನೇನು ಭ್ರಷ್ಟಾಚಾರ ಮಾಡಿದ್ದಾನೆಂಬುದನ್ನು ತೋರಿಸುತ್ತೇನೆ. ಇವೆಲ್ಲ ಪುರಾವೆಗಳನ್ನು ಕೊಟ್ಟರೂ ಏನೂ ಮಾಡುತ್ತಿಲ್ಲ. ಇದು ಸತ್ಯಂ ಕೇಸ್ ಏನೋ ಗೊತ್ತಾಗುತ್ತಿಲ್ಲ. ಸಾವಿರಾರು ರೂಪಾಯಿಗಳ ವಂಚನೆ ಕೇಸ್ ಇದು ಇದೆಯೇ? ನಾನು ಸಚಿವರಲ್ಲಿ ವಿನಂತಿ ಮಾಡುತ್ತೇನೆ, ತನಿಖೆ ಆಗುವವರೆಗೆ, ನೀವು ಯಾವಾಗ ಬೇಕಾದರೂ ತನಿಖೆ ಮಾಡಿ, ಒಂದು ವರ್ಷವಾದರೂ ಮಾಡಿ, 6 ತಿಂಗಳು ಮಾಡಿ, ಅದಕ್ಕೆ ನನ್ನದೇನೂ ತಕರಾರು ಇಲ್ಲ. ಯಾರದಾದರೂ ರಾಜಕೀಯ ಒತ್ತಡದ ಮಾತು ಕೇಳಿ ಭ್ರಷ್ಟ ಅಧಿಕಾರಿಗಳನ್ನು ನನ್ನ ಕ್ಷೇತ್ರಕ್ಕೆ ತಂದು ಹಾಕಿ ಭ್ರಷ್ಟಾಚಾರ ಮಾಡುವಂಥ ವ್ಯವಸ್ಥೆ ನನ್ನ ಕ್ಷೇತ್ರದಲ್ಲಿ ಆಗಬಾರದು. ಇಂಥ ಎರಡು ಮೂರು ಉದಾಹರಣೆಗಳನ್ನು ನಾವು ಲೋಕೋಪಯೋಗಿ ಇಲಾಖೆಯ ಸಚಿವರಿಗೂ ಕೊಟ್ಟಿದ್ದೇವೆ. ಒಬ್ಬ ಅಧಿಕಾರಿಗೆ ಒಂದು ಲಕ್ಷ ರೂಪಾಯಿ ದಂಡ ಹಾಗೂ ಕಾರಾಗೃಹ ವಾಸ ಶಿಕ್ಷೆ ಯಾಗಿದ್ದರೂ ಕೂಡ ಅವನನ್ನು ಜಿಲ್ಲೆಯಿಂದ ಹೊರಗೆ ಹಾಕುವುದಕ್ಕೆ ತಯಾರಾಗಿಲ್ಲ. ನೀವೇನು ನಿರ್ಣಯ ತೆಗೆದುಕೊಂಡಿದ್ದೀರೋ ನನಗೆ ಗೊತ್ತಿಲ್ಲ. ಎಲ್ಲಾ ಭ್ರಷ್ಟ ಅಧಿಕಾರಿಗಳನ್ನು ತಂದು ನನ್ನ ಕ್ಷೇತ್ರದಲ್ಲಿ ಹಾಕಿದರೆ ನಾನೂ ಕೂಡ ಭ್ರಷ್ಟಾಚಾರದಲ್ಲಿ ಭಾಗ ಆಗಬೇಕೆಂಬ ವಿಚಾರ ಇಟ್ಟುಕೊಂಡಿದ್ದೀರೋ, ಹೇಗೆ? ಇಲ್ಲಿ ನಾನು ಮಾತನಾಡುವುದಕ್ಕಿಂತ ಮುಂಚೆ ಮಾನ್ಯ ಸಭಾಧ್ಯಕ್ಷರಿಗೆ ನ್ಯಾಯ ಒದಗಿಸಿಕೊಡಿ ಎಂದು ಕಳಕಳಿಯಿಂದ ವಿನಂತಿ ಮಾಡಿದ್ದೆ. ಇದರಲ್ಲಿ ಸತ್ಯಾಂಶವಿದೆ. ಸತ್ಯಾಂಶವಿಲ್ಲದಿದ್ದಿದ್ದರೆ ನಾನು ಹೇಳುವುದಕ್ಕೆ ತಯಾರಾಗುತ್ತಿರಲಿಲ್ಲ. ಅವನ ಮೇಲೆ enquiry ಆಗುವವರೆಗೆ ಆ ಸ್ಥಳಕ್ಕೆ ಬೇಕಾದವರನ್ನು ಹಾಕಿ. ನಾನೇನೂ ಬೇಡ ಎಂದು ಹೇಳುವುದಿಲ್ಲ. ಈಗೇನು ಸಂಬಳಿ ಎನ್ನುವವನಿದ್ದಾನೆ, ಆ ಅಧಿಕಾರಿಯನ್ನು ಮಾತ್ರ ಹಾಕಬಾರದೆಂದು ಕಳಕಳಿಯಿಂದ ವಿನಂತಿ ಮಾಡುತ್ತೇನೆ. ದಯವಿಟ್ಟು, ತನಿಖೆ ಬೇಡ. ನಾವು 2007ರಲ್ಲಿ ಜಿಲ್ಲಾಧಿಕಾರಿಯವರಿಗೆ ಅರ್ಜಿ ಕೊಟ್ಟಿದ್ದೇವೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ :- ಮಾನ್ಯ ಹಿರಿಯ ಸದಸ್ಯರಾದ ಪ್ರಕಾಶ್ ಹುಕ್ಕೇರಿಯವರು ತಮ್ಮ ಕ್ಷೇತ್ರಕ್ಕೆ ಭ್ರಷ್ಟ ಅಧಿಕಾರಿಯನ್ನು ಕಳುಹಿಸಿದ್ದಾರೆಂದು ಏನು ಹೇಳಿದ್ದಾರೆ ಅದು ತಪ್ಪು. ಭ್ರಷ್ಟಾಚಾರಿ ಎಂದು ಯಾರ ಹಣೆ ಮೇಲೆಯೂ ಬರೆದಿರುವುದಿಲ್ಲ. ನಿಮ್ಮ ಕ್ಷೇತ್ರಕ್ಕೆ ಭ್ರಷ್ಟ ಅಧಿಕಾರಿಯನ್ನು ಕಳುಹಿಸಬೇಕೆನ್ನುವ ಉದ್ದೇಶ ಸರ್ಕಾರಕ್ಕಿಲ್ಲ. ದಯಮಾಡಿ, ತಾವು ಆ ಶಬ್ದವನ್ನು ಬಳಸಬಾರದೆಂದು ವಿನಂತಿ

ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ದಿನಾಂಕ 13-12-2008ರಂದು ಸದಲಗ ಪಟ್ಟಣ ಪಂಚಾಯತಿಯಲ್ಲಿ ಅವ್ಯವಹಾರ ನಡೆದಿದೆ ಎಂದು complaint ಬಂದಿದೆ. ಶೀ ಐ.ಎಂ.ಸಂಬಳಿ, Chief Officer ರವರು ದಿನಾಂಕ 26-06-2006ರಿಂದ ದಿನಾಂಕ 18-7-2008ರವರೆಗೆ ಸದಲಗ ಪಟ್ಟಣ ಪಂಚಾಯತಿಯಲ್ಲಿ ಕೆಲಸ ಮಾಡಿದ್ದಾರೆ. ಅದಾದ ಮೇಲೆ ದಿನಾಂಕ 15-1-2009ರಂದು ಪರಿಶೀಲಿಸಿ ವರದಿ ನೀಡುವಂತೆ ಜಿಲ್ಲಾಧಿಕಾರಿಯವರಿಗೆ ಸೂಚನೆ ನೀಡಲಾಗಿದೆ. ದಿನಾಂಕ : 20-01-2009ರಂದು ತನಿಖಾ ತಂಡವನ್ನು ರಚಿಸಲಾಗಿದೆ. ದಿನಾಂಕ : 29-1-2009 ಮತ್ತು 31-1-2009 ಈ ಎರಡು ದಿವಸ ಈ ತನಿಖಾ ತಂಡ ಸದಲಗಾ ಪಟ್ಟಣ ಪಂಚಾಯತಿಗೆ ಹೋಗಿ ಏನಾಗಿದೆ ಎಂದು ನೋಡಿ ಆ ಬಗ್ಗೆ ಸಮಗ್ರವಾದ ವರದಿಯನ್ನು 15 ದಿವಸಗಳಲ್ಲಿ ಕೊಡಬೇಕೆಂದು ಹೇಳಿದ್ದೇವೆ. 15 ದಿವಸಗಳಲ್ಲಿ ವರದಿ ಬಂದ ತಕ್ಷಣ ಆ ಅಧಿಕಾರಿ ಏನಾದರೂ ತಪ್ಪು ಮಾಡಿರುವುದು ಕಂಡು ಬಂದರೆ ಖಂಡಿತವಾಗಿಯೂ ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳತ್ತದೆಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶೀ ಪ್ರಕಾಶ್ ಬಿ. ಹುಕ್ಕೇರಿ :- ನೀವು ಆ ಅಧಿಕಾರಿ ಮೇಲೆ ವಿಶ್ವಾಸ ಇಟ್ಟಿದ್ದೀರೋ ಅಥವಾ ಶಾಸಕರ ಮೇಲೆ ವಿಶ್ವಾಸ ಇಟ್ಟಿದ್ದೀರೋ? ನಾನು ಪುರಾವೆಗಳನ್ನು ಕೊಡುತ್ತೇನೆ. ಶಾಸಕರು ಹೇಳುವುದರಲ್ಲಿ ಏನಾದರೂ ಸುಳ್ಳು ಇದೆಯೇ? ಎಲ್ಲಾ ಪುರಸಭೆ ಸದಸ್ಯರು ಕೂಡ ಅರ್ಜಿ ಕೊಟ್ಟಿದ್ದಾರೆ. ಅವನು ಏನೇನು ಮಾಡಿದ್ದಾನೆಂಬ ಬಗ್ಗೆ ದಾಖಲೆಗಳನ್ನು ಕೊಡುತ್ತೇವೆ. 15 ದಿವಸ ಬಿಟ್ಟು ಪುನ: ತನಿಖೆ ಮಾಡಿ. ಆದರೆ, ಆ ಪುರಸಭಾ ಸೆಕ್ರೆಟರಿಯನ್ನು ಅಲ್ಲಿಗೆ ಹಾಕಬೇಡಿ. ಬೇರೆ ಯಾರನ್ನಾದರೂ ಹಾಕಿ. ನಮ್ಮದೇನೂ ತಕರಾರು ಇಲ್ಲ. ತಾವು ನಮಗೆ ನ್ಯಾಯ ಒದಗಿಸಿಕೊಡಿ. ಇಲ್ಲದಿದ್ದರೆ ನಾನು ಸದನದ ಬಾವಿಗೆ ಬರುತ್ತೇನೆ.

(ಗೊಂದಲ)

ಅಧ್ಯಕ್ಷರು :- ಆದರೂ 4-5 ಸಲ ಆರಿಸಿ ಬಂದಿದ್ದೀರಲ್ಲಾ.

ಶೀ ಪ್ರಕಾಶ್ ಬಿ. ಹುಕ್ಕೇರಿ :- ನಾನು 5ನೇ ಸಲ ಆರಿಸಿ ಬಂದಿದ್ದೇನೆಂದು ಏನೋ ವಿಚಾರ ಮಾಡಿ ಮೂಲೆಗೆ ತಂದು ಕೂರಿಸಿದ್ದೀರಿ.

ಅಧ್ಯಕ್ಷರು :- ಬಾಲಚಂದ್ರರವರೆ, ಮಾನ್ಯ ಸದಸ್ಯರು ಕೇಳಿದ ಬಗ್ಗೆ ಏನಾದರೂ action ತೆಗೆದುಕೊಳ್ಳಿ. ಅವರು 5 ಸಲ ಆರಿಸಿ ಬಂದವರು. ಏನಾದರೂ serious action ತೆಗೆದುಕೊಳ್ಳಿ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ :- ನಾವು 15 ದಿವಸಗಳಲ್ಲಿ ತನಿಖೆ ಮಾಡಿಸಿ ವರದಿ ತರಿಸಿಕೊಳ್ಳುತ್ತೇವೆ. ಅದಕ್ಕೆ ಮಾನ್ಯ ಸದಸ್ಯರು 15 ದಿವಸಗಳವರೆಗೆ ಸಮಾಧಾನವಾಗಿರಬೇಕೆಂದು ಕೋರುತ್ತೇನೆ. ಮಾನ್ಯ ಸದಸ್ಯರಿಗೆ ಆ ಅಧಿಕಾರಿ ವರ್ಗಾವಣೆ ಆಗಬೇಕೋ ಅಥವಾ ಆ ಅಧಿಕಾರಿಯ ಮೇಲೆ enquiry ಆಗಬೇಕೋ ಇದರಲ್ಲಿ ಯಾವುದು ಆಗಬೇಕೆಂಬುದನ್ನು ಸ್ಪಷ್ಟಪಡಿಸಿದರೆ ಒಳ್ಳೆಯದು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನೀವು ಈ ತರಹ ಪ್ರಶ್ನೆ ಕೇಳಬೇಡಿ. ಆ ಅಧಿಕಾರಿ ವರ್ಗಾವಣೆ ಆಗಬೇಕು. ವರ್ಗಾವಣೆ ಮಾಡುವುದು ನಿಮಗೆ ಬಿಟ್ಟಿದ್ದು. ನಾನು ಹೇಳುವುದಕ್ಕೆ ಹೇಗೆ ಆಗುತ್ತದೆ? ವರ್ಗಾವಣೆ ಮಾಡುವವರೇ ನೀವು. ಅವನ ಮೇಲೆ action ತೆಗೆದುಕೊಳ್ಳುವವರೇ ನೀವು. ನಾವು ಇದಕ್ಕಿಂತ ಹೆಚ್ಚಿಗೆ ಇನ್ನೇನು ಮಾಡುವುದಕ್ಕಾಗುತ್ತದೆ? ಆ ಅಧಿಕಾರಿಯನ್ನು ಅಲ್ಲಿ ಹಾಕಬಾರದು. ಅವನು ಯಾವುದೇ ಕಾಗದಪತ್ರ ತೋರಿಸುವುದಿಲ್ಲ. ಅವನನ್ನು ಬೇರೆ ಕಡೆಗೆ shift ಮಾಡಿ.

ಅಧ್ಯಕ್ಷರು :- ಆ ವ್ಯಕ್ತಿಯನ್ನು ಬೇರೆ ಕಡೆಗೆ shift ಮಾಡಿ. Enquiry ನಡೆಸುತ್ತಿದ್ದೀರಿ ಅಲ್ಲವೇ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ :- ಹೌದು, enquiry ನಡೆಸುತ್ತೇವೆ. 29ನೇ ತಾರೀಕಿಗೆ ಟೀಂ ಅಲ್ಲಿಗೆ ಹೋಗುತ್ತದೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನಾವು ಜಿಲ್ಲಾಧಿಕಾರಿಗಳಿಗೆ ದಿನಾಂಕ 15-7-2008 ರಲ್ಲಿ ಪತ್ರ ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳನ್ನೂ ಭೇಟಿಯಾಗಿದ್ದೇನೆ. UD Secretary ಯವರನ್ನೂ ಸಹ ಭೇಟಿಯಾಗಿ ಅವರ ಕಛೇರಿಗೆ ಎಲ್ಲಾ records ಕೊಟ್ಟು 6 ತಿಂಗಳಾಯಿತು. ಆದರೆ, ಏನೂ ಆಗಿಲ್ಲ. ಇದರಲ್ಲಿ ರಾಜಕೀಯವಿದೆ, ರಾಜಕೀಯ ಒತ್ತಡವಿದೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ :- ಮಾನ್ಯ ಸದಸ್ಯರು ಆ ಅಧಿಕಾರಿಯನ್ನು ವರ್ಗಾವಣೆ ಮಾಡಬೇಕೆಂದು ಬಯಸುತ್ತಿದ್ದಾರೆ. ಟೀಂ ಅಲ್ಲಿಗೆ ಹೋಗುತ್ತಿದೆ. 15 ದಿವಸಗಳಲ್ಲಿ ಅವರನ್ನು ವರ್ಗಾವಣೆ ಮಾಡುತ್ತೇವೆ. ಆದರೆ, ಅವರ ತಪ್ಪಿಲ್ಲವೆಂದು ಕಂಡುಬಂದರೆ ಪುನಃ ಅವರನ್ನು ಅಲ್ಲಿಗೇ posting ಮಾಡುತ್ತೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಸರ್ಕಾರ ಅವರದೇ ಇದೆ. ಅಧಿಕಾರಿಗಳು ಅವರೇ ಇದ್ದಾರೆ.

ಅಧ್ಯಕ್ಷರು :- ಅದಕ್ಕೆ CBI ಗೆ ವಹಿಸಬೇಕೆಂದು ಹೇಳುತ್ತೀರಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಬೇಡ. ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ ಬೇಡ. ಅವನನ್ನು ವರ್ಗಾವಣೆ ಮಾಡಿ ಸಾಕು.

ಅಧ್ಯಕ್ಷರು :- ಸಚಿವರು ಹೇಳಿದ್ದಾರೆ.

(ಅ) ವಿಷಯ :- ಶಿರಸಿ ಕೆ.ಡಿ.ಸಿ.ಸಿ.ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ತನಿಖಾ ವರದಿಯ ಮೇರೆಗೆ ಕೈಗೊಂಡಿರುವ ಕ್ರಮದ ಬಗ್ಗೆ.

ಶ್ರೀ ಎ. ಸುನೀಲ ಎ. ಹೆಗಡೆ (ಹಳಿಯಾಳ) :- ಮಾನ್ಯ ಅಧ್ಯಕ್ಷರೆ, ಶಿರಸಿ ಕೆ.ಡಿ.ಸಿ.ಸಿ.ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ತನಿಖಾ ವರದಿಯ ಮೇರೆಗೆ ಕೈಗೊಂಡಿರುವ ಕ್ರಮದ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಆರ್.ಎಸ್. ಭಾಗವತ್, ಮಾಜಿ ವಿಧಾನಪರಿಷತ್ ಸದಸ್ಯರು ಹಾಗೂ ನಿರ್ದೇಶಕರು, ಕೆ.ಡಿ.ಸಿ.ಸಿ ಬ್ಯಾಂಕ್ ಇವರು ದಿನಾಂಕ :- 06-10-2008 ರಂದು ಸಹಕಾರ ಸಂಘಗಳ ನಿಬಂಧಕರ ಕಛೇರಿಗೆ ಮನವಿ/ಅರ್ಜಿಯನ್ನು ಸಲ್ಲಿಸಿ, ಕೆನರಾ ಡಿ.ಸಿ.ಸಿ. ಬ್ಯಾಂಕ್ ನಿ., ಶಿರಸಿ ಇದರಲ್ಲಿ ಅವ್ಯವಹಾರಗಳು ಜರುಗಿ, ಬ್ಯಾಂಕಿಗೆ ನಷ್ಟವುಂಟಾಗಿರುವ ಕಾರಣ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರ ಅಡಿಯಲ್ಲಿ ವಿಚಾರಣೆ ಮಾಡುವಂತೆ ವಿನಂತಿಸುತ್ತಾರೆ.

ಶ್ರೀ ಆರ್. ಎಸ್. ಭಾಗವತ್ ಇವರು ನೀಡಿರುವ ಅರ್ಜಿಗಳಲ್ಲಿನ ಆರೋಪಗಳ ಬಗ್ಗೆ ಇಲಾಖಾ ಅಧಿಕಾರಿಗಳ ಮೂಲಕ ಪರಿಶೀಲನೆ ಮಾಡಿದಾಗ ಕೆಲವು ಆರೋಪಗಳಲ್ಲಿ ಸತ್ಯಾಂಶವಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ವಿವರಗಳು ಕೆಳಗಿನಂತಿವೆ.

* ಬ್ಯಾಂಕಿನ ಸಿಬ್ಬಂದಿ ನೇಮಕಾತಿಯಲ್ಲಿ ಎರಡು ಪ್ರಕರಣಗಳಲ್ಲಿ ರೋಸ್ಟರ್ ಉಲ್ಲಂಘನೆ ಮಾಡಿರುವುದು.

* ಕೃಷಿಯೇತರ ಸಾಲಗಳನ್ನು ಮಂಜೂರು ಮಾಡುವಲ್ಲಿ ಹೆಚ್ಚಿನ ಮೊತ್ತದ ಸಾಲವನ್ನು ಮಂಜೂರು ಮಾಡಿದ್ದು ಕೆಲವು ಕೃಷಿಯೇತರ ಸಾಲಗಳಿಗೆ ಸೂಕ್ತ ಭದ್ರತೆ ಪಡೆಯದಿರುವುದು. ನಬಾರ್ಡಿನ ಎಕ್ಸ್‌ಪೋಷರ್ ನಾರ್ಮ್‌ಗಳನ್ನು ಉಲ್ಲಂಘನೆ ಮಾಡಿ ಸಾಲ ಮಂಜೂರು ಮಾಡಿರುವುದು. ಬ್ಯಾಂಕಿನ ಕೆಲವು ನಿರ್ದೇಶಕರುಗಳಿಗೆ ದೊಡ್ಡ ಮೊತ್ತದ ಸಾಲವನ್ನು ಮಂಜೂರು ಮಾಡಿರುವುದು.